# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಮಲ್ಲಿಕಾರ್ಜುನ ಎನ್. ಮಾಳಗೇರ, ಅಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಹಿರೇಕೆರೂರು ಹಾಗೂ ಇತರರ ವಿರುದ್ಧ ಶಿಸ್ತು ಕ್ರಮ - ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತ-1ರವರಿಗೆ ವಹಿಸುವ ಬಗ್ಗೆ - ಆದೇಶ.

ಓದಲಾಗಿದೆ:- 1) ಸಹಾಯಕ ನಿಬಂಧಕರು ಕಾನೂನು ಅಭಿಪ್ರಾಯ-1, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ. Compt/ Uplok/ BGM-2642/2013/ ARLO-1 ದಿನಾಂಕ. 22-06-2015.

2) ಮಾನ್ಯ ಉಪ ಲೋಕಾಯುಕ್ತ-1ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರಡಿಯಲ್ಲಿ ಸಲ್ಲಿಸಿರುವ ವರದಿ ಸಂಖ್ಯೆ Compt/ Uplok/ BGM-2642/2013/ ARLO-1 ದಿನಾಂಕ. 20-06-2015.

-----

## ಪ್ರಸ್ತಾವನೆ

ಸಹಾಯಕ ನಿಬಂಧಕರು ಕಾನೂನು ಅಭಿಪ್ರಾಯ-1, ಕರ್ನಾಟಕ ಲೋಕಾಯುಕ್ತ ಕಚೇರಿ, ಬೆಂಗಳೂರು ರವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ 22-06-2015ರ ಪತ್ರದ ಜೊತೆ ಮಾನ್ಯ ಉಪಲೋಕಾಯುಕ್ತ-1ರವರು ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಸೆಕ್ಷನ್ 12 (3) ರನ್ವಯ ನೀಡಿರುವ ವರದಿಯನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕಳುಹಿಸುತ್ತಾ, ಮಾನ್ಯ ಉಪ ಲೋಕಾಯುಕ್ತ-1ರವರ ಶಿಫಾರಸ್ಸಿನಂತೆ ಕ್ರಮವಹಿಸಲು ಕೋರಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತ-1ರವರು ಲೋಕಾಯುಕ್ತ ಕಾಯ್ದೆ 12 (3)ರಂತೆ ಸಲ್ಲಿಸಿರುವ ವರದಿ ಹಾಗೂ ಲಗತ್ತಿಸಿರುವ ದಾಖಲೆಗಳನ್ನು ಪರಿಶೀಲಿಸಿದೆ. ಶ್ರೀ ಶಿದ್ದಪ್ಪ ಬಾನಶೆಪ್ಪ ಹಾದಿಮನಿ, ಅಂಗರಗಟ್ಟಿ ಗ್ರಾಮ, ಹಿರೇಕೆರೂರು ತಾಲ್ಲೂಕು, ಹಾವೇರಿ ಜಿಲ್ಲೆ ಇವರು ಹಿರೇಕೆರೂರು ತಾಲ್ಲೂಕು ವ್ಯಾಪ್ತಿಯಲ್ಲಿ 2010-11 ಮತ್ತು 2011-12ನೇ ಸಾಲಿನ 13ನೇ ಹಣಕಾಸು ಯೋಜನೆಯಡಿ ಕೈಗೊಳ್ಳಲಾಗಿರುವ 11 ವಿವಿಧ ಕಾಮಗಾರಿಗಳಲ್ಲಿ ಶ್ರೀ ಟಿ.ಸುಭಾಷ್‌ಚಂದ್ರ, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಹಿರೇಕೆರೂರು ಇವರು ಅವ್ಯವಹಾರವೆಸಗಿರುತ್ತಾರೆಂದು ಕರ್ನಾಟಕ ಲೋಕಾಯುಕ್ತ ಕಚೇರಿಯಲ್ಲಿ ದೂರನ್ನು ಸಲ್ಲಿಸಿರುತ್ತಾರೆ.

ಸದರಿ ದೂರಿಗೆ ಸಂಬಂಧಿಸಿದಂತೆ ಲೋಕಾಯುಕ್ತ ಕಚೇರಿಯು ಶ್ರೀ ಸುಭಾಷ್‌ಚಂದ್ರ, ಕಿರಿಯ ಇಂಜಿನಿಯರ್ ಇವರಿಂದ ಆಕ್ಷೇಪಣೆಯನ್ನು ಪಡೆದು ಪರಿಶೀಲಿಸಿದ ಸಂದರ್ಭದಲ್ಲಿ ದೂರಿನಲ್ಲಿರುವ ಕಾಮಗಾರಿಗಳನ್ನು ಹಿರೇಕೆರೂರು ತಾಲ್ಲೂಕು ಪಂಚಾಯತ್, ಕಾರ್ಯನಿರ್ವಾಹಕ ಅಧಿಕಾರಿಯಾದ ಶ್ರೀ ಮಲ್ಲಿಕಾರ್ಜುನ ಎನ್. ಮಾಳಗೇರ, ಹಿರಿಯ ಅಭಿಯಂತರರಾದ ಶ್ರೀ ಬಿ.ಓಂಕಾರ ನಾಯಕ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳಾಗಿದ್ದ ಶ್ರೀ ಟಿ.ಎಂ.ರುದ್ರಪಶುಪತಿ ಮತ್ತು ಶ್ರೀ ಕೆ.ವಿ.ಹಂಚಿನಮನಿ ಇವರುಗಳು ನಿರ್ವಹಿಸಿದ್ದಾರೆಂದು ಸದರಿ ಕಾಮಗಾರಿಗಳಲ್ಲಿ ಯಾವುದೇ ಹಣ ದುರುಪಯೋಗವಾಗಿಲ್ಲವೆಂದು ತಿಳಿಸಿ ದೂರಿನಲ್ಲಿನ ಆಪಾದನೆಗಳನ್ನು ಅಲ್ಲಗಳೆದಿರುತ್ತಾರೆ.

---2

ಶ್ರೀ ಸಿದ್ಧಪ್ಪ ಬಾನಶೆಪ್ಪ ಹಾದಿಮನಿ ಇವರು ಸಲ್ಲಿಸಿರುವ ದೂರಿನ ಬಗ್ಗೆ ಕರ್ನಾಟಕ ಲೋಕಾಯುಕ್ತ ಕಚೇರಿಯು ತನಿಖೆಯನ್ನು ಕೈಗೊಂಡು ಸಲ್ಲಿಸಿರುವ ವರದಿಯಲ್ಲಿ, ಅಂಗರಗಟ್ಟಿ ಗ್ರಾಮದಲ್ಲಿರುವ ಅಂಗನವಾಡಿ ಕಟ್ಟಡದ ದುರಸ್ತಿಯನ್ನು, ಚರಂಡಿಯನ್ನು, ಅಂಗರಗಟ್ಟಿ ಗ್ರಾಮದಲ್ಲಿನ ಹಿರಿಯ ಉರ್ದು ಪ್ರಾಥಮಿಕ ಶಾಲೆಗೆ, ಕಿರಿಯ ಕನ್ನಡ ಪ್ರಾಥಮಿಕ ಶಾಲೆಗೆ ಸುಣ್ಣ ಬಣ್ಣ ಮಾಡುವ ಕಾಮಗಾರಿಯನ್ನು ಹಾಗೂ ಕೆಂಚಾಯಿಕೊಪ್ಪ ಹಾಗೂ ಅಣಜಿ ಗ್ರಾಮಗಳ ಪ್ರಾಥಮಿಕ ಶಾಲಾ ಕಟ್ಟಡದ ದುರಸ್ತಿ ಕಾಮಗಾರಿಗಳನ್ನು ಅಳತೆ ಪುಸ್ತಕದಲ್ಲಿ ದಾಖಲಿಸಿದ್ದ ಅನುಸಾರ ಮಾಡದೆ ಕರ್ತವ್ಯ ಲೋಪವನ್ನು ಎಸಗಿ, ಒಟ್ಟು ರೂ. 1,76,689/- ಆರ್ಥಿಕ ನಷ್ಟ ಉಂಟು ಮಾಡಿದ್ದು, ಸದರಿ ಆರ್ಥಿಕ ನಷ್ಟಕ್ಕೆ ಈ ಕೆಳಕಂಡ ಅಧಿಕಾರಿ / ನೌಕರರು ಅವರ ಹೆಸರಿನ ಮುಂದೆ ನಮೂದಿಸಿರುವ ಮೊತ್ತಕ್ಕೆ ಹೊಣೆಗಾರರಾಗಿರುತ್ತಾರೆಂದು ತಿಳಿಸಲಾಗಿದೆ:-

| ಕ್ರ.ಸಂ. | ಹೆಸರು, ಹುದ್ದೆ ಮತ್ತು ಕಚೇರಿ ವಿಳಾಸ | ಆರ್ಥಿಕ ನಷ್ಟದ ಮೊತ್ತ ರೂ. ಗಳಲ್ಲಿ |
|---|---|---|
| 1. | ಶ್ರೀ ಮಲ್ಲಿಕಾರ್ಜುನ ಎನ್. ಮಾಳಗೇರ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಹಿರೇಕೆರೂರು. | 58,896/- |
| 2. | ಶ್ರೀ ಟಿ.ಎಂ.ರುದ್ರಪಶುಪತಿ, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಹಿರೇಕೆರೂರು. | 39,534/- |
| 3. | ಶ್ರೀ ಕೆ.ವಿ.ಹಂಚಿನಮನಿ, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಹಿರೇಕೆರೂರು. | 19,362/- |
| 4. | ಶ್ರೀ ಟಿ.ಸುಭಾಷ್‌ಚಂದ್ರ, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಹಿರೇಕೆರೂರು. | 54,838/- |
| 5. | ಶ್ರೀ ಬಿ.ಓಂಕಾರ್ ನಾಯಕ್, ಕಿರಿಯ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಹಿರೇಕೆರೂರು. | 4,059/- |

ಸದರಿ ತನಿಖಾ ವರದಿಯ ಪ್ರತಿಯನ್ನು ಮೇಲಿನ 5 ಅಧಿಕಾರಿ / ನೌಕರರಿಗೆ ಕಳುಹಿಸಿ, ಅವರ ಆಕ್ಷೇಪಣೆಗಳನ್ನು ಕೇಳಲಾಗಿದ್ದು, ಕ್ರ.ಸಂ. 2ರಲ್ಲಿನ ಶ್ರೀ ಟಿ.ಎಂ.ರುದ್ರಪಶುಪತಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) ರವರು ಯಾವುದೇ ಆಕ್ಷೇಪಣೆಗಳನ್ನು ಸಲ್ಲಿಸಿರುವುದಿಲ್ಲವೆಂದು, ಇನ್ನುಳಿದವರು ಸಲ್ಲಿಸಿರುವ ಆಕ್ಷೇಪಣೆಗಳಲ್ಲಿ ಕಾಮಗಾರಿಗಳನ್ನು ನಿಯಮಾನುಸಾರ ನಿರ್ವಹಿಸಿದ್ದು, ಯಾವುದೇ ನ್ಯೂನ್ಯತೆಗಳು ಇಲ್ಲವೆಂದು ಹಾಗೂ ಆರ್ಥಿಕ ನಷ್ಟ ಉಂಟಾಗಿಲ್ಲವೆಂದು ತಿಳಿಸಿ ತನಿಖಾ ವರದಿಯಲ್ಲಿನ ಅಂಶಗಳನ್ನು ಅಲ್ಲಗಳೆದಿರುತ್ತಾರೆ.

ಮಾನ್ಯ ಉಪ ಲೋಕಾಯುಕ್ತ-1ರವರು ತನಿಖಾ ವರದಿ, ಆಪಾದಿತ ಅಧಿಕಾರಿ / ನೌಕರರು ಸಲ್ಲಿಸಿರುವ ಆಕ್ಷೇಪಣೆಗಳು ಮತ್ತು ದಾಖಲಾತಿಗಳನ್ನು ಪರಿಶೀಲಿಸಿದ್ದು, ಮೇಲೆ ತಿಳಿಸಿರುವ 5 ಮಂದಿ ಆಪಾದಿತರುಗಳು ಆರ್ಥಿಕ ನಷ್ಟಕ್ಕೆ ಜವಾಬ್ದಾರರಾಗಿದ್ದು, ಸದರಿಯವರುಗಳ ವಿರುದ್ಧದ ನಡವಳಿಕೆಯನ್ನು ಕೈ ಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಕಾರಣ ತೋರಿಸಿಲ್ಲವೆಂದೂ, ಸದರಿಯವರುಗಳು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರದೆ, ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯ ಲೋಪ ಎಸಗಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ 3(1)ನ್ನು ಉಲ್ಲಂಘಿಸಿ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ

---3

ಕಂಡುಬರುವುದರಿಂದ ಸದರಿಯವರುಗಳಿಂದ ಸರ್ಕಾರಕ್ಕೆ ಆಗಿರುವ ಆರ್ಥಿಕ ನಷ್ಟದ ಮೊತ್ತವನ್ನು ಬಡ್ಡಿ ಸಮೇತ ಕಾನೂನಿನ ಅನ್ವಯ ವಸೂಲು ಮಾಡಲು ಹಾಗೂ ಪ್ರಕರಣದಲ್ಲಿ ಭಾಗಿಯಾಗಿರುವ ಆಪಾದಿತರುಗಳ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ನಡೆಸುವ ಸಲುವಾಗಿ ಪ್ರಕರಣವನ್ನು ತಮಗೆ ವಹಿಸುವಂತೆ ಮಾನ್ಯ ಉಪ ಲೋಕಾಯುಕ್ತ-1ರವರು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಮಾನ್ಯ ಉಪ ಲೋಕಾಯುಕ್ತ-1ರವರ ಶಿಫಾರಸ್ಸು, ತನಿಖಾ ವರದಿಯಲ್ಲಿನ ಅಂಶಗಳು ಹಾಗೂ ಇತರೆ ದಾಖಲೆಗಳನ್ನು ಸರ್ಕಾರವು ಪರಿಶೀಲಿಸಿರುತ್ತದೆ. ಸದರಿ ದಾಖಲೆಗಳ ಪರಿಶೀಲನೆಯಿಂದ ಪ್ರಕರಣದಲ್ಲಿ ಭಾಗಿಯಾಗಿರುವ ಮೇಲೆ ತಿಳಿಸಿರುವ 5 ಜನ ಅಧಿಕಾರಿ / ನೌಕರರು ಪ್ರಸ್ತಾಪಿತ ಕಾಮಗಾರಿಗಳನ್ನು ಅಳತೆ ಪುಸ್ತಕದಲ್ಲಿ ದಾಖಲಿಸಿದ ಅಳತೆಗಳ ಅನುಸಾರ ಮಾಡದೆ ಕರ್ತವ್ಯ ಲೋಪವನ್ನು ಎಸಗಿ ಸರ್ಕಾರಕ್ಕೆ ಒಟ್ಟು ರೂ. 1,76,689/- ಆರ್ಥಿಕ ನಷ್ಟ ಉಂಟು ಮಾಡಿರುವುದು ಕಂಡು ಬಂದಿರುತ್ತದೆ. ಸದರಿ ಅಧಿಕಾರಿ / ನೌಕರರು ಸರ್ಕಾರಿ ನೌಕರರಾಗಿ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಪರಿಪೂರ್ಣ ಪ್ರಾಮಾಣಿಕತೆ ಹಾಗೂ ಸಂಪೂರ್ಣ ನಿಷ್ಠೆ ತೋರದೆ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ 3(1) ನ್ನು ಉಲ್ಲಂಘಿಸಿ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಇವರುಗಳ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಇಲಾಖಾ ವಿಚಾರಣೆ ನಡೆಸುವುದು ಅವಶ್ಯವೆಂದು ಕಂಡು ಬಂದಿರುತ್ತದೆ. ಆದ್ದರಿಂದ, ಪ್ರಕರಣವನ್ನು ಮಾನ್ಯ ಉಪ ಲೋಕಾಯುಕ್ತ -1ರವರಿಗೆ ವಹಿಸಲು ಸರ್ಕಾರವು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

---

**ಆದೇಶ ಸಂಖ್ಯೆ : ಗ್ರಾಅಪ 73 ಇಎನ್‌ಕ್ಯೂ 2015 ಬೆಂಗಳೂರು, ದಿನಾಂಕ.14-07-2015**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರವು ಈ ಕೆಳಕಂಡ ಅಧಿಕಾರಿ / ನೌಕರರುಗಳು ಹಾವೇರಿ ಜಿಲ್ಲೆ, ಹಿರೇಕೆರೂರು ತಾಲ್ಲೂಕಿನ ವಿವಿಧ ಗ್ರಾಮಗಳ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗಿರುವ ಕಾಮಗಾರಿಗಳನ್ನು ಅಳತೆ ಪುಸ್ತಕದಲ್ಲಿ ದಾಖಲಿಸಿದ ವಿವರಗಳಂತೆ ನಿರ್ವಹಿಸದಿರುವುದರಿಂದ ಸದರಿಯವರುಗಳ ವಿರುದ್ಧದ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 11ರಂತೆ ನಡೆಸುವ ಸಲುವಾಗಿ ಸದರಿ ನಿಯಮಗಳ ನಿಯಮ 14(ಎ) ರ ಅನುಸಾರ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತ-1ರವರಿಗೆ ವಹಿಸಿದೆ.

1. **ಶ್ರೀ ಮಲ್ಲಿಕಾರ್ಜುನ ಎನ್. ಮಾಳಗೇರ, ಅಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಹಿರೇಕೆರೂರು,**
2. **ಶ್ರೀ ಕೆ.ವಿ.ಹಂಚಿನಮನಿ, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಹಿರೇಕೆರೂರು,**
3. **ಶ್ರೀ ಟಿ.ಸುಭಾಷ್‌ಚಂದ್ರ, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಹಿರೇಕೆರೂರು**
4. **ಶ್ರೀ ಓಂಕಾರ್ ನಾಯಕ್, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಹಿರೇಕೆರೂರು.**

ಶ್ರೀ ಟಿ.ಎಂ.ರುದ್ರಪಶುಪತಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರು ಸೇವೆಯಿಂದ ನಿವೃತ್ತಿ ಹೊಂದಿರುವುದರಿಂದ ಇವರ ಮೇಲಿನ ಆರೋಪಗಳ ಬಗ್ಗೆ ವಿವರವಾದ ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ

---4

ನಿಯಮ 11ರಂತೆ ನಡೆಸುವ ಸಲುವಾಗಿ ಸರ್ಕಾರವು ಕೆ.ಸಿ.ಎಸ್.ಆರ್. ನಿಯಮ 214 (2)(b)(i) ರಡಿ ಮಂಜೂರಾತಿಯನ್ನು ನೀಡಿ, ಪ್ರಕರಣವನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957 ರ ನಿಯಮ 14(ಎ)ರಂತೆ ಮಾನ್ಯ ಉಪ ಲೋಕಾಯುಕ್ತ-1 ರವರಿಗೆ ವಹಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಸಿದ್ದೇಶ್ ಪೂತಲಕಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ (ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1. ಮಹಾಲೇಖಪಾಲರು, (ಅ ಮತ್ತು ಇ) ಕರ್ನಾಟಕ, ಬೆಂಗಳೂರು.
2. ನಿಬಂಧಕರು, ಕರ್ನಾಟಕ ಲೋಕಾಯುಕ್ತ ಕಚೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ.
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
5. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ), ಬೆಂಗಳೂರು.
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಹಾವೇರಿ.
7. ಸಹಾಯಕ ನಿಬಂಧಕರು ಕಾನೂನು ಅಭಿಪ್ರಾಯ-1, ಕರ್ನಾಟಕ ಲೋಕಾಯುಕ್ತ ಕಚೇರಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
8. ಶ್ರೀ ಮಲ್ಲಿಕಾರ್ಜುನ ಎನ್. ಮಾಳಗೇರ, ಅಂದಿನ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಹಿರೇಕೆರೂರು ಇವರಿಗೆ – ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಹಾವೇರಿ ಇವರ ಮುಖಾಂತರ
9. ಶ್ರೀ ಕೆ.ವಿ.ಹಂಚಿನಮನಿ, ಅಂದಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಹಿರೇಕೆರೂರು ಇವರಿಗೆ – ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಹಾವೇರಿ ಇವರ ಮುಖಾಂತರ
10. ಶ್ರೀ ಟಿ.ಸುಭಾಷ್‌ಚಂದ್ರ, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಹಿರೇಕೆರೂರು ಇವರಿಗೆ – ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಹಾವೇರಿ ಇವರ ಮುಖಾಂತರ
11. ಶ್ರೀ ಓಂಕಾರ್ ನಾಯಕ್, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಹಿರೇಕೆರೂರು ಇವರಿಗೆ – ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಹಾವೇರಿ ಇವರ ಮುಖಾಂತರ
12. ಶ್ರೀ ಟಿ.ಎಂ.ರುದ್ರಪಶುಪತಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ (ನಿವೃತ್ತ) ಇವರಿಗೆ ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಸೇವೆಗಳು-ಎ ಇವರ ಮುಖಾಂತರ.

ಪ್ರತಿ ಮಾಹಿತಿಗಾಗಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
2. ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ (ಸೇವೆಗಳು – ಎ & ಸಿ).
3. ಗ್ರಾ.ಅ.ಪಂ.ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ / ಜಂಟಿ ಕಾರ್ಯದರ್ಶಿ ಇವರ ಆಪ್ತ ಕಾರ್ಯದರ್ಶಿ / ಆಪ್ತ ಸಹಾಯಕರು.
4. ಹೆಚ್ಚುವರಿ ಪ್ರತಿ : ರಕ್ಷಾ ಕಡತ : ಸೂಚನಾ ಫಲಕ : ಕಂಪ್ಯೂಟರ್ ಸೆಲ್.